# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು-572 103

ಸಂಖ್ಯೆ: ತುವಿ: ಡಿಇವಿ-02:2025-26| 3524 ದಿನಾಂಕ:16.02.2026

## ಸುತ್ತೋಲೆ

ವಿಷಯ: ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ಆಯೋಜಿಸಿರುವ ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಕುರಿತು.

ಉಲ್ಲೇಖ:1. ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರ ಪತ್ರ ಸಂ:ಟಿ.ಆರ್.ಐ/ಮೈ/ಸಂವಿ/ಸಿಆರ್/2025-26 ದಿನಾಂಕ:02.02.2026

2. ಮಾನ್ಯ ಕುಲಸಚಿವರ ಅನುಮೋದನೆ ದಿನಾಂಕ:16.02.2026 (ಕಂಡಿಕೆ-109)

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ಬುಡಕಟ್ಟು ಸಮುದಾಯಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಕುಲಶಾಸ್ತ್ರೀಯ ಸಂಶೋಧನಾ ಅಧ್ಯಯನಗಳನ್ನು ಕೈಗೊಳ್ಳುತ್ತಿದೆ. ಇದರೊಟ್ಟಿಗೆ ವಿಚಾರ ಸಂಕಿರಣ, ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಅರಿವು ಕಾರ್ಯಕ್ರಮ, ಆರೋಗ್ಯ ಶಿಬಿರಗಳು ಹಾಗೂ ಕಲೆ, ಸ್ವಯಂ ಉದ್ಯೋಗ ಉತ್ತೇಜಿಸುವ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬರುತ್ತಿವೆ.

ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಪೂರಕವಾಗಿ ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಪ್ರಾಧ್ಯಾಪಕರು, ಸಂಶೋಧಕರು ಹಾಗೂ ತಜ್ಞರಿಂದ, ಸಲಹೆ ಹಾಗೂ ಮಾರ್ಗದರ್ಶನ ಪಡೆಯುವ ನಿಟ್ಟಿನಲ್ಲಿ ದಿನಾಂಕ:19.02.2026 ರಿಂದ 03.03.2026 ರವರೆಗೆ ರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಏರ್ಪಡಿಸಿದ್ದು, ಸದರಿ ವಿಚಾರ ಸಂಕಿರಣದಲ್ಲಿ ಭಾಗವಹಿಸುವಂತೆ ಉಲ್ಲೇಖ(01)ರ ಪತ್ರದಲ್ಲಿ ತಿಳಿಸಿರುತ್ತಾರೆ.

ಈ ಸಂಬಂಧ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ದಿನಾಂಕ:19.02.2026 ರಿಂದ 03.03.2026 ರವರೆಗೆ ಆಯೋಜಿಸಿರುವ ವಿಚಾರ ಸಂಕಿರಣದಲ್ಲಿ ಆಸಕ್ತ ಅಧ್ಯಾಪಕರು ಮತ್ತು ಸಂಶೋಧನಾರ್ಥಿಗಳು ನಿಯಮಾನುಸಾರ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದೆ ಭಾಗವಹಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಆದೇಶದ ಮೇರೆಗೆ

ಉಪಕುಲಸಚಿವರು

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಅಧ್ಯಕ್ಷರು/ಸಂಯೋಜಕರು ಸ್ನಾತಕೋತ್ತರ ವಿಜ್ಞಾನ ವಿಭಾಗಗಳು,"ಜ್ಞಾನಸಿರಿ ಕ್ಯಾಂಪಸ್" ಬಿದರಕಟ್ಟೆ, ಹೆಬ್ಬೂರು ಹೋಬಳಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಅಧ್ಯಕ್ಷರು/ಸಂಯೋಜಕರು, ಶಿರಾ ಸ್ನಾತಕೋತ್ತರ ಅಧ್ಯಯನ ಕೇಂದ್ರ ಮತ್ತು ತಿಪಟೂರು ಸ್ನಾತಕೋತ್ತರ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ನಿರ್ದೇಶಕರು, ಸಂಶೋಧನಾ ವಿಭಾಗ, (ಪಿ.ಹೆಚ್.ಡಿ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ಗಣಕಯಂತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-ಈ ಸುತ್ತೋಲೆಯನ್ನು ಸಂಬಂಧಿಸಿದವರಿಗೆ ಇ-ಮೇಲ್ ಮೂಲಕ ಕಳುಹಿಸಲು ಸೂಕ್ತ ಕ್ರಮವಹಿಸುವುದು.
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುವಿತು.
3. ಕಚೇರಿ ಪ್ರತಿ.

ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ,
ಮೈಸೂರು.
#ಸಿಎ 3, ಖಜಾನೆ ಬಡಾವಣೆ, ಕೇರ್ಗಳ್ಳಿ, ಮೈಸೂರು- 570026, ದೂರವಾಣಿ : 0821-2560275, ಇ ಮೇಲ್ :
trimysore@gmail.com

ಮಾನ್ಯರೆ,

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ದಿನಾಂಕ 19.02.2026 ರಿಂದ 03.03.2026ರ ವರೆಗೆ ಒಟ್ಟು 06 ರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡಿದೆ. ಈ ಸಂಬಂಧ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಹಾಗೂ ಪತ್ರಿಕೆ ಮಂಡಿಸಲು ಕೋರಲಾಗಿದೆ.

**ರಾಷ್ಟ್ರೀಯ ವಿಚಾರ ಸಂಕಿರಣಗಳ ವಿಷಯ ಮತ್ತು ದಿನಾಂಕ**

| S N | Date | Subject |
|---|---|---|
| 1 | 19.02.2026 To 20.02.2026 | Role of Tribal Women in Economic Activities and Development in Cultural Context |
| 2 | 23.02.2026 To 24.02.2026 | The Impact of Globalization and cultural Beliefs on Tribal health and Healthcare Practices |
| 3 | 26.02.2026 | Developing Eco – Friendly Tourism in Tribal Areas, Balancing Conservation and Economic Growth |
| 4 | 27.02.2026 | Role of NGO's in Tribal Development |
| 5 | 02.03.2026 | Tribal Related Issues |
| 6 | 03.03.2026 | Welfare Schemes of Neighboring States of Karnataka |

ಕರ್ನಾಟಕ ಸರ್ಕಾರ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

**ನಿರ್ದೇಶಕರ ಕಚೇರಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ,**

ಸಿ.ಎ-3 ಖಜಾನೆ ನೌಕರರ ಬಡಾವಣೆ, ಕೇರ್ಗಳ್ಳಿ, ಮೈಸೂರು-570026, ದೂರವಾಣಿ : 0821-2560275, ಇ-ಮೇಲ್

trimysore@gmail.com

ಸಂ: ಟಿ.ಆರ್.ಐ/ಮೈ/ಸಂವಿ/ಸಿಆರ್/ 2025-26 ದಿನಾಂಕ :02.02.2026

ಇವರಿಗೆ,

ಕುಲಸಚಿವರು

ತುಮಕೂರು ವಿಶ್ವವಿದ್ಯಾಲಯ

ವಿಶ್ವ ವಿದ್ಯಾನಿಲಯ ಕಾರ್ಯಾಲಯ

ಬಿ.ಹೆಚ್ ರೋಡ್ ತುಮಕೂರು – 572103

ಮಾನ್ಯರೆ,

ವಿಷಯ : ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಕುರಿತು.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ಬುಡಕಟ್ಟು ಸಮುದಾಯಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಹಾಗೂ ಕುಲಶಾಸ್ತ್ರೀಯ ಸಂಶೋಧನಾ ಅಧ್ಯಯನಗಳನ್ನು ಕೈಗೊಳ್ಳುತ್ತಿದೆ. ಇದರೊಟ್ಟಿಗೆ ವಿಚಾರ ಸಂಕಿರಣ, ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಅರಿವು ಕಾರ್ಯಕ್ರಮ, ಆರೋಗ್ಯ ಶಿಬಿರಗಳು ಹಾಗೂ ಕಲೆ, ಸ್ವಯಂ ಉದ್ಯೋಗ ಉತ್ತೇಜಿಸುವ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬರುತ್ತಿದೆ.

ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಪೂರಕವಾಗಿ ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಪ್ರಾಧ್ಯಾಪಕರು, ಸಂಶೋಧಕರು ಹಾಗೂ ತಜ್ಞರಿಂದ, ಸಲಹೆ ಹಾಗೂ ಮಾರ್ಗದರ್ಶನ ಪಡೆಯುವ ನಿಟ್ಟಿನಲ್ಲಿ ದಿನಾಂಕ:19.02.2026 ರಿಂದ 03.03.2026 ರವರೆಗೆ 6 ರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಏರ್ಪಡಿಸಿದ್ದು, ತಮ್ಮ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲಾ ವಿಭಾಗಗಳಿಗೆ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಸೂಚಿಸಲು ಈ ಮೂಲಕ ಕೋರಲಾಗಿದೆ.

ನಿರ್ದೇಶಕರು

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ

ಮೈಸೂರು.,

ಲಗತ್ತು :

1.ವಿಚಾರ ಸಂಕಿರಣದ ಮಾಹಿತಿ ಪತ್ರಗಳು(ಬ್ರೋಚರ್‌ಗಳು).

2.ವಿಚಾರ ಸಂಕಿರಣದ ವಿಷಯ ಹಾಗೂ ದಿನಾಂಕಗಳ ವಿವರದ ಪತ್ರ

ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು